# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 179 | Pages. 2 | Date: 25-06-2026, THURSDAY | RNI NO: KARKAN/2024/89601 | Kannada Daily

ಸಂಪುಟ : 02 – ಸಂಚಿಕೆ : 179 – ಪುಟಗಳು : 2 | 25-06-2026 ಗುರುವಾರ | Ph: 8762954248 | ದರ : ₹1


# ಶಿಕ್ಷಣದಿಂದ ಮಾತ್ರ ಅಜ್ಞಾನ-ಬಡತನ ನಿರ್ಮೂಲನೆ

## ಕಬ್ಬಳಿ ಬಸವೇಶ್ವರ ದೇಗುಲದಲ್ಲಿ ಗುರು ದರ್ಶನ | ಚುಂಚಶ್ರೀಗಳಿಂದ ಆಶೀರ್ವಚನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಅಜ್ಞಾನ ಹಾಗೂ ಬಡತನವನ್ನು ನಿರ್ಮೂಲನೆ ಮಾಡುವ ಶಕ್ತಿ ಶಿಕ್ಷಣಕ್ಕೆ ಮಾತ್ರ ಇದೆ ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.



ತಾಲ್ಲೂಕಿನ ಪುರಾಣ ಪ್ರಸಿದ್ಧ ಶ್ರೀಕ್ಷೇತ್ರ ಕಬ್ಬಳಿ ಶ್ರೀ ಬಸವೇಶ್ವರಸ್ವಾಮಿ ಸನ್ನಿಧಿಯಲ್ಲಿ ಬುಧವಾರ ಹಮ್ಮಿಕೊಂಡಿದ್ದ ಗುರು ದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶಿಕ್ಷಣದಿಂದ ಮಾತ್ರ ಸಮಾಜದ ಬದಲಾವಣೆ ಮತ್ತು ಸುಧಾರಣೆ ಸಾಧ್ಯ ಎಂದರು.

ವ್ಯಾಸಂಗದ ಬಳಿಕ ಉನ್ನತ ಹುದ್ದೆಗಳನ್ನು ಪಡೆಯುವುದೇ ಮುಖ್ಯ ಉದ್ದೇಶವಾಗಬಾರದು. ತಾನು ಯಾರ ಬಳಿಯೋ ಕೆಲಸ ಮಾಡುವ ಬದಲು ಹತ್ತಾರು ಮಂದಿಗೆ ಉದ್ಯೋಗ ಕೊಡುವ ಹಂತಕ್ಕೆ ಬೆಳೆಯಬೇಕು. ಅದರಿಂದ ಶಿಕ್ಷಣ ಪಡೆದಿದ್ದಕ್ಕೂ ಸಾರ್ಥಕವಾಗಲಿದೆ. ಹೆತ್ತವರು ಮತ್ತು ಹುಟ್ಟಿದ ಊರಿಗೆ ಕೀರ್ತಿ ಬರುತ್ತದೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಓದು ಹಾಗು ಬರೆಯುವುದನ್ನು ಕಲಿತರೆ ಎಲ್ಲವೂ ಮುಗಿಯುವುದಿಲ್ಲ. ಜೀವನ ಆರಂಭವಾಗುವುದು ಅಲ್ಲಿಂದ ಎಂಬ ಅರಿವು ಇರಬೇಕು. ಓದಿ ವಿದ್ಯಾವಂತರಾಗಿ ದುಡಿಮೆಯೊಂದಿಗೆ ಉತ್ತಮ ಬದುಕು ಕಟ್ಟಿಕೊಳ್ಳಬೇಕು. ನಂತರ ತಾನು ಹುಟ್ಟಿ ಬೆಳೆದ ಊರಿನ ಬಗ್ಗೆಯೂ ಚಿಂತನೆ ಮಾಡಬೇಕು. ಎಲ್ಲರನ್ನೂ ಒಗ್ಗೂಡಿಸಿ ಊರಿನ ಅಭಿವೃದ್ಧಿಗೆ ಶ್ರಮಿಸಬೇಕು. ಶೈಕ್ಷಣಿಕ ಹಂತದಿಂದಲೇ ಸಮಾಜಮುಖಿ ಚಿಂತನೆ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಹಣ ಕಟ್ಟಿ ಶಾಲೆಗೆ ಮಕ್ಕಳನ್ನು ಸೇರಿಸಿದರೆ ಜವಾಬ್ದಾರಿ ಮುಗಿಯಿತು ಎಂದುಕೊಳ್ಳುವ ಅದೆಷ್ಟೋ ಪಾಲಕರಿದ್ದಾರೆ. ಅದು ತಪ್ಪು ಕಲ್ಪನೆ. ಮಕ್ಕಳ ಶೈಕ್ಷಣಿಕ ವ್ಯವಸ್ಥೆ ಮೇಲೆ ಕಣ್ಣಾಡಿಸಬೇಕು. ತಾವು ಮಕ್ಕಳೊಂದಿಗೆ ಕುಳಿತು ಮಕ್ಕಳ ಮನಸ್ಸಿನಲ್ಲಿ ಏನಿದೆ ಎಂಬುದನ್ನು ಅರಿತು ಅದಕ್ಕೆ ತಕ್ಕಂತೆ ಆದ್ಯತೆ ನೀಡಬೇಕು. ಯಶಸ್ಸಿನ ಶಿಖರವನ್ನು ಏರುವವರೆಗೂ ಬೆಂಗಾವಲಾಗಿ ನಿಲ್ಲಬೇಕು. ಮಕ್ಕಳು ಸಾಧನೆಯ ಗುರಿ ಮುಟ್ಟಿದ ಕ್ಷಣವೇ ಹೆತ್ತವರ ಬದುಕು ಸಾರ್ಥಕವಾಗುತ್ತದೆ. ಶ್ರಮ ಫಲಿಸಿದಂತಾಗಲಿದೆ. ಆದ್ದರಿಂದ ಪಾಲಕರು ತಮ್ಮ ಮಕ್ಕಳ ಹಿಂದೆ ನಿಲ್ಲಬೇಕು ಎಂದು ಸಲಹೆ ನೀಡಿದರು.

ಯಾರು ಯಾರು ತಮ್ಮ ಪಾಲಕರೊಂದಿಗೆ ಆಂಗ್ಲ ಭಾಷೆಯಲ್ಲಿ ಮಾತನಾಡುತ್ತೀರಿ ಎಂದು ವಿದ್ಯಾರ್ಥಿಗಳಿಗೆ ಪ್ರಶ್ನಿಸಿದ ಚುಂಚಶ್ರೀ, ಮನೆಯಲ್ಲಿ ಸದಾ ಮಾತೃಭಾಷೆ ಕನ್ನಡ ಪ್ರಚಲಿತದಲ್ಲಿರಲಿ. ಆದರೆ ವ್ಯಾಪಾರ, ವ್ಯವಹಾರ ಹಾಗೂ ಶೈಕ್ಷಣಿಕ ವ್ಯವಸ್ಥೆಯ ಪ್ರಗತಿ ಸಲುವಾಗಿ ಆಂಗ್ಲ ಭಾಷೆ ಕಲಿಕೆ ಇರಲಿ. ಜೊತೆಗೆ ಪಾಲಕರಿಗೆ ಆಂಗ್ಲ ಭಾಷೆ ತಿಳಿದಿದ್ದರೆ ತಮ್ಮ ಮಕ್ಕಳ ಶೈಕ್ಷಣಿಕ ವಿಚಾರಗಳಿಗೆ ಸಹಕಾರಿಯಾಗಲಿದೆ ಎಂದರು.

ನಂತರ ಚುಂಚಶ್ರೀಗಳು ವಿದ್ಯಾರ್ಥಿಗಳ ಮಧ್ಯೆ ನಿಂತು ಓಂಕಾರ ಹಾಗೂ ಕೆಲ ಶ್ಲೋಕಗಳನ್ನು ಹೇಳಿಕೊಟ್ಟರು. ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ, ಕಬ್ಬಳಿ ಶಾಖಾ ಮಠದ ಶ್ರೀ ಶಿವಪುತ್ರನಾಥ ಸ್ವಾಮೀಜಿ, ಶಾಸಕ ಸಿ.ಎನ್.ಬಾಲಕೃಷ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ, ಸಾಹಿತಿ ತಮ್ಮಣ್ಣಗೌಡ, ಮುಖ್ಯ ಶಿಕ್ಷಕ ಟಿ.ತಿಮ್ಮೇಗೌಡ, ಶಿಕ್ಷಕ ವೃಂದ ಇತರರಿದ್ದರು.

# ಹೊ.ನ.ಪುರ ಸರ್ಕಾರಿ ಆಸ್ಪತ್ರೆಗೆ ಶಾಸಕ ರೇವಣ್ಣ ದಿಢೀರ್ ಭೇಟಿ



ಹೊಳೆನರಸೀಪುರ: ಹೊರ ಗುತ್ತಿಗೆ ನೌಕರರನ್ನು ಕೆಲಸದಿಂದ ತೆಗೆದು ಹಾಕಿದ್ದಕ್ಕೆ ಸಂಬಂಧಿಸಿದಂತೆ ಧರಣಿ ನಡೆಸಿದ ಕಾರಣ, ಬುಧವಾರ ಸಾರ್ವಜನಿಕ ಆಸ್ಪತ್ರೆಗೆ ಶಾಸಕ ಹೆಚ್.ಡಿ.ರೇವಣ್ಣ ಅವರು ಭೇಟಿ ನೀಡಿ, ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಮಂಜುಳಾ ಕೆ.ಎಲ್. ಮತ್ತು ಸುರಕ್ಷಾ ಏಜೆನ್ಸಿಯ ಸುರೇಶ್ ಅವರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದರು.

ಆಸ್ಪತ್ರೆಯ ಮುಂಭಾಗದಲ್ಲಿ ಮಂಗಳವಾರ ತಾಲೂಕು ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ 3 ಗಂಟೆಗಳಿಗೂ ಹೆಚ್ಚು ಸಮಯ ಧರಣಿ ನಡೆಸಿದ್ದರು.

ಶಾಸಕರು ಇಂದು ನೌಕರರ ನೇಮಕಾತಿ ಮತ್ತು ವೇತನಕ್ಕೆ ಸಂಬಂಧಿಸಿದ ಗೊಂದಲ ನಿವಾರಿಸಲು ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಆಸ್ಪತ್ರೆಯ ಸಿಬ್ಬಂದಿ ವರ್ಗಾವಣೆಯಲ್ಲಿ ಮತ್ತು ಹೊಸ ನೇಮಕಾತಿಯಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳುವಂತೆ ತಿಳಿಸಿದರು.

### ನೌಕರರ ದಿಢೀರ್ ಪ್ರತಿಭಟನೆ

ಆಸ್ಪತ್ರೆಯಲ್ಲಿ 70 ಹೊರಗುತ್ತಿಗೆ ನೌಕರರು ಕೆಲಸ ಮಾಡುತ್ತಿದ್ದಾರೆ. ಅದರಲ್ಲಿ 20 ಜನರನ್ನು ಏಕಾಏಕಿ ಕೆಲಸದಿಂದ ತೆಗೆದು ಹಾಕಲಾಗಿದೆ ಎಂದು ಆರೋಪಿಸಿ ಮಂಗಳವಾರ ಸಂಜೆ ಉದ್ಯೋಗಿಗಳು ಪ್ರತಿಭಟನೆ ನಡೆಸಿದ್ದರು. ಸ್ಥಳಕ್ಕೆ ಸಂಸದ ಶ್ರೇಯಸ್ ಪಟೇಲ್ ಭೇಟಿ ನೀಡಿ ನೌಕರರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದರು.

ಆಸ್ಪತ್ರೆಯಲ್ಲಿ ರೋಗಿಗಳಿಗೆ ಲಭ್ಯವಿರುವ ಸೌಲಭ್ಯಗಳು, ಸ್ವಚ್ಛತೆ ಮತ್ತು ಮೂಲಭೂತ ಅವಶ್ಯಕತೆಗಳ ಬಗ್ಗೆ ಚರ್ಚಿಸಲಾಯಿತು. ಯಾವುದೇ ನೌಕರರನ್ನು ಏಕಾಏಕಿ ಕೆಲಸದಿಂದ ತೆಗೆಯದಂತೆ ಮತ್ತು ನಿಯಮಗಳ ಪ್ರಕಾರ ನೇಮಕಾತಿ ಪ್ರಕ್ರಿಯೆಯನ್ನು ನಡೆಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯ ಮೂಲಕ ನೌಕರರ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಆಸ್ಪತ್ರೆಯ ಆಡಳಿತವನ್ನು ಸುಗಮಗೊಳಿಸಲು ಕ್ರಮ ಕೈಗೊಳ್ಳಲು ಸೂಚಿಸಿದರು.

ಡಾ.ನಾಗೇಂದ್ರ, ಡಾ.ಸೆಲ್ವ ಕುಮಾರ್, ಡಾ.ನಟರಾಜ್, ಮತ್ತು ಧರಣಿ ನಿರತರು ಮತ್ತು ಆಸ್ಪತ್ರೆಯ ಆಡಳಿತ ವಿಭಾಗದ ಸಿಬ್ಬಂದಿ, ವೈದ್ಯರು ಇದ್ದರು.

# ಮಕ್ಕಳಲ್ಲಿ ಸಾಂಸ್ಕೃತಿಕ ಅಭಿರುಚಿ ಹೆಚ್ಚಲಿ: ಬೇಲೂರು ರಘುನಂದನ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳ ಮನಸಿಗೆ ಮಾತ್ರ ಜಾಗ ಮಾಡಲಾಗಿದೆ. ಆದರೆ ಮಕ್ಕಳ ದೇಹದ ಚಲನೆಗೆ ಸೀಮಿತ ಅವಕಾಶವನ್ನು ನೀಡಲಾಗಿದೆ ಎಂದು ರಂಗಕರ್ಮಿ ಡಾ. ಬೇಲೂರು ರಘುನಂದನ್ ಅಭಿಪ್ರಾಯಪಟ್ಟರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆದ ಎರಡು ದಿನಗಳ ಗೋಕುಲ ಸಹೃದಯ ಎಂಬ ಹದಿನೈದು ವರ್ಷದ ಬಾಲಕನ ಬೇಲೂರು ಗೋಕುಲೋತ್ಸವದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಮಕ್ಕಳು ಅಂಕಗಳ ಜೊತೆಗೆ ಕಲಾಮಾಧ್ಯಮದಲ್ಲೂ ತಮ್ಮ ಶಕ್ತಿಯನ್ನು ನಿರೂಪಿಸಬಲ್ಲರು. ಆದರೆ ಸಾಂಸ್ಕೃತಿವಾಗಿ ಮಕ್ಕಳನ್ನು ದೂರವಿಡುವ ಕೆಲಸವನ್ನು ನಮ್ಮ ಶಿಕ್ಷಣ ವ್ಯವಸ್ಥೆ ಮಾಡುತ್ತಿದೆ ಎಂದರು.

ನನ್ನ ಮಗ ಗೋಕುಲ ಸಹೃದಯ ತನ್ನ ನಾಲ್ಕನೇ ವಯಸ್ಸಿನಿಂದಲೂ ತನ್ನನ್ನು ತೊಡಗಿಸಿಕೊಂಡಿದ್ದಾನೆ. ಆತನಿಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ ಇರಲು ಅವಕಾಶ ಮಾಡಿಕೊಡುವುದು ಪೋಷಕನಾದ ನನ್ನ ಕರ್ತವ್ಯ. ಅವನ ಆಸಕ್ತಿಯ ರಂಗಭೂಮಿಯಲ್ಲಿ ಮುನ್ನಡೆಯುವ ಜೊತೆಗೆ ಶಿಕ್ಷಣವನ್ನು ಶಕ್ತವಾಗಿ ಮಾಡುತ್ತಿದ್ದಾನೆ. ಇದು ಎಲ್ಲಾ ಪೋಷಕರಿಗೂ ಮಾದರಿಯಾಗಬೇಕು ಎಂದರು.

ವಿಜಯ ಶಾಲೆಯ ತಾರಾ ಸುಬ್ಬಸ್ವಾಮಿ ಮಾತನಾಡಿ, ಚಿಟ್ಟೆ ನಾಟಕದ ಪ್ರಚಾರದ ವಿವರಗಳನ್ನು ನೋಡಿ ನಾಟಕಕ್ಕೆ ಬಂದಿದ್ದೆವು. ನಿಜಕ್ಕೂ ಗೋಕಿಲ ಸಹೃದಯ ಈ ನಾಡಿನ ಆಸ್ತಿ. ಆತನ ಅಭಿನಯ ಇತರೆ ಮಕ್ಕಳಿಗೂ ಮಾದರಿಯಾಗುವಂತದು ಎಂದರು.

ಹಿರಿಯ ಪತ್ರಕರ್ತ ರವಿ ನಾಕಲಗೂಡು ಮಾತನಾಡಿ, ಡಾ. ಬೇಲೂರು ರಘುನಂದನ್ ಅವರ ಪತ್ನಿ ಲಕ್ಷ್ಮಿ ಹಾಗೂ ಇಬ್ಬರು ಮಕ್ಕಳೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಗಮನಾರ್ಹ ಕೆಲಸ ಮಾಡುತ್ತಿದ್ದಾರೆ ಎಂದರು.

ರಾಜ್ಯ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಮಾತನಾಡಿ, ಚಿಟ್ಟೆ ಹಾಗೂ ಪಂಚಗವ್ಯ ನಾಟಕಗಳ ಮೂಲಕ ಗೋಕುಲ ಸಹೃದಯ ತನ್ನನ್ನು ಸಾಬೀತು ಮಾಡಿದ್ದಾನೆ. ಆತನನ್ನು ಮುಂದೆ ಕನ್ನಡ ಸಾಂಸ್ಕೃತಿಕ ಲೋಕ ಹೇಗೆ ನಡೆಸಿಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕು ಎಂದು ಹೇಳಿದರು.

ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಆಯೋಜಕ ಚಲಂ ಹಾಡ್ಲಹಳ್ಳಿ ಮತ್ತಿತರರಿದ್ದರು.

# ಹಾಸನದಲ್ಲಿ ಜೂ. 28ಕ್ಕೆ ಚೊಚ್ಚಲ ಚುಟುಕು ಸಾಹಿತ್ಯ ಸಮ್ಮೇಳನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜೂ.28ರಂದು ಜಿಲ್ಲಾ ಪ್ರಥಮ ಚುಟುಕು ಸಾಹಿತ್ಯ ಸಮ್ಮೇಳನವನ್ನು ನಗರದ ಎ.ವಿ.ಕಾಂತಮ್ಮ ಮಹಿಳಾ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಚುಟುಕು ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಾ.ನಂ.ಲೋಕೇಶ್ ಹೇಳಿದರು.




ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ವೈಶಿಷ್ಟ್ಯತೆ ಹೊಂದಿರುವ ಚುಟುಕು ಸಾಹಿತ್ಯವನ್ನು ಮತ್ತಷ್ಟು ಜನಪ್ರಿಯಗೊಳಿಸುವ ಹಾಗೂ ಹೊಸ ತಲೆಮಾರಿನ ಬರಹಗಾರರಿಗೆ ಪ್ರೋತ್ಸಾಹಿಸುವ ಉದ್ದೇಶದಿಂದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ. ಡಾ. ರತ್ನಹಾಲಪ್ಪಗೌಡ ಅವರು ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ ಎಂದರು.

ಶ್ರೀರಂಗ ಪಟ್ಟಣದ ಡಾ. ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಲಿದ್ದು, ಮಾಜಿ ಸಚಿವೆ ಲೀಲಾದೇವಿ ಆರ್.ಪ್ರಸಾದ್ ಉದ್ಘಾಟನೆ ನೆರವೇರಿಸಲಿದ್ದಾರೆ. ಶಾಸಕ ಹೆಚ್.ಪಿ.ಸ್ವರೂಪ್ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಶ್ರೇಯಸ್ ಎಂ. ಪಟೇಲ್ ಹಾಗೂ ಇತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಸಮ್ಮೇಳನ ಸಂಚಾಲಕ ರವಿ ನಾಕಲಗೂಡು ಮಾತನಾಡಿ, ಭಾನುವಾರ ಬೆಳಿಗ್ಗೆ 8.30ಕ್ಕೆ ಹೇಮಾವತಿ ಪ್ರತಿಮೆಯಿಂದ ಕಾಲೇಜಿನ ಸಭಾಂಗಣದ ವರೆಗೆ ಮೆರವಣಿಗೆ ನಡೆಯಲಿದೆ. ಬೆಳಿಗ್ಗೆ 9.30ಕ್ಕೆ ನಾಡಧ್ವಜ ಹಾಗೂ ಪರಿಷತ್ತಿನ ಧ್ವಜಾರೋಹಣ ನೆರವೇರಲಿದೆ. ಬೆಳಿಗ್ಗೆ 10 ಗಂಟೆಗೆ ಉದ್ಘಾಟನಾ ಸಮಾರಂಭ ನಡೆಯಲಿದೆ. ಗೌರವಾಧ್ಯಕ್ಷ ರಾಜೇಂದ್ರ ದೊಡ್ಡಮಗ್ಗೆ ಆಶಯ ನುಡಿ ಆಡಲಿದ್ದಾರೆ. ಬಾ.ನಂ. ಲೋಕೇಶ್ ಅವರು ಬರೆದಿರುವ ಸಾಲರ್ ದೇಶದಲ್ಲಿ ಧರ್ಮಯುದ್ಧ, ಅನುಪಮ ಚಂದ್ರು ಅವರ ವೇದ ಸಿರಿ ಕವನ ಸಂಕಲನ, ಗೊರೂರು ಅನಂತರಾಜು ಅವರ ಸನ್ಮಾನ ಪ್ರಶಸ್ತಿ ಪರಂತು, ಶಿರಾ ವೆಂಕಟೇಶ್ ಸಂಪಾದಕತ್ವದ ಭಾವೋನ ಕೃತಿಗಳ ಬಿಡುಗಡೆ ಆಗಲಿದೆ ಎಂದರು.

ಮಧ್ಯಾಹ್ನ 12.30ಕ್ಕೆ ಚುಟುಕು ಸಾಹಿತ್ಯ - ಬದುಕಿಗೆ ಲಾಲಿತ್ಯ ವಿಷಯದ ಗೋಷ್ಠಿ ನಡೆಯಲಿದೆ. ಚುಟುಕು ಸಾಹಿತ್ಯದ ಅರ್ಥ, ಪ್ರಸ್ತುತತೆ, ಸಾಮಾಜಿಕ ಪರಿಣಾಮ ಹಾಗೂ ಸೃಜನಾತ್ಮಕ ಆಯಾಮಗಳ ಕುರಿತು ರಾಜ್ಯದ ಖ್ಯಾತ ಸಾಹಿತಿಗಳು ವಿಚಾರ ಮಂಡಿಸಲಿದ್ದಾರೆ.

ಡಾ.ಹೆಚ್.ಆರ್.ಆದರ್ಶ್, ರಾಜೇಶ್ವರಿ ಹುಲ್ಲೇನಹಳ್ಳಿ, ಎಂ.ಎನ್. ಸುಂದರ್‌ರಾಜ್ ಹಾಗು ಸೌಮ್ಯ ಬಾನಾಡಿ ಅವರು ವಿವಿಧ ಆಯಾಮಗಳಲ್ಲಿ ವಿಚಾರ ಮಂಡನೆ ಮಾಡಲಿದ್ದಾರೆ. ಮಧ್ಯಾಹ್ನ 1.30ಕ್ಕೆ ತಂಗಿಯ ತಲ್ಲಣ-ಅಕ್ಕನ ಅಕ್ಕರೆ ಗೋಷ್ಠಿ ನಡೆಯಲಿದೆ. ಮಹಿಳಾ ಸಾಹಿತ್ಯ, ಮಹಿಳಾ ಹಕ್ಕುಗಳು, ಸಮಾನತೆ, ಸಾಮಾಜಿಕ ನ್ಯಾಯ ಹಾಗೂ ಸ್ತ್ರೀ ಸಂವೇದನೆಗಳ ಕುರಿತು ಲೇಖಕಿಯರು ಮತ್ತು ಚಿಂತಕರು ವಿಚಾರ ಮಂಡನೆ ಮಾಡಲಿದ್ದಾರೆ. ಸುಶೀಲಾ ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದು, ಕಲಾವತಿ ಮಧುಸೂದನ, ಸ.ವೆಂ. ಪೂರ್ಣಿಮಾ ಹಾಗೂ ಸತ್ಯಪ್ರಿಯ ಸುತೆ ಸೇರಿದಂತೆ ಹಲವರು ಭಾಗವಹಿಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಸತ್ಯದ ಶೋಧ-ಸೌಂದರ್ಯದ ಸೃಷ್ಟಿ ಗೋಷ್ಠಿ ನಡೆಯಲಿದ್ದು, ಪತ್ರಿಕೋದ್ಯಮ ಮತ್ತು ಸಾಹಿತ್ಯದ ಸಂಬಂಧ, ಸಮಾಜ ನಿರ್ಮಾಣದಲ್ಲಿ ಪತ್ರಿಕೆಯ ಪಾತ್ರ, ವರದಿಗಾರರ ಸೃಜನಶೀಲತೆ ಹಾಗೂ ಸಾಹಿತ್ಯದ ಸಾಮಾಜಿಕ ಹೊಣೆಗಾರಿಕೆ ಕುರಿತು ಹಿರಿಯ ಪತ್ರಕರ್ತರು ವಿಚಾರ ಹಂಚಿಕೊಳ್ಳಲಿದ್ದಾರೆ. ಚಲಂ ಹಾಡ್ಲಹಳ್ಳಿ ಅಧ್ಯಕ್ಷತೆ ವಹಿಸಲಿದ್ದು, ಜಿ. ಪ್ರಕಾಶ್, ಅತೀಖುರ್ ರೆಹಮಾನ್ ಮೊದಲಾದವರು ವಿಚಾರ ಮಂಡಿಸುವರು. ಮಧ್ಯಾಹ್ನ 3.30ಕ್ಕೆ ಬಹುಭಾಷಾ ಕವಿಗೋಷ್ಠಿ ನಡೆಯಲಿದೆ. ಸಂಜೆ 5.30 ಗಂಟೆಗೆ ಸಮ್ಮೇಳನ ಸಮಾರೋಪ ಸಮಾರಂಭ ಜರುಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಲೋಕೇಶ್, ಸೋಮನಾಯಕ್, ಆದರ್ಶ್, ತ್ರಿವೇಣಿ, ಪೂರ್ಣಿಮಾ, ಕಲಾವತಿ ಮಧುಸೂದನ್, ಹರೀಶ್, ಲತಾ ಇದ್ದರು.

# ಎಸ್ಐಆರ್: ಕಾಂಗ್ರೆಸ್ ಆರೋಪಕ್ಕೆ ಕಿವಿಗೊಡಬೇಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಚುನಾವಣಾ ಆಯೋಗ ವಿಶೇಷ ಮತದಾರರ ಪರಿಷ್ಕರಣೆ ನಡೆಸುತ್ತಿದ್ದು ಆ ಬಗ್ಗೆ ಕಾಂಗ್ರೆಸ್‌ನವರು ಮಾಡುತ್ತಿರುವ ಸುಳ್ಳು ಆರೋಪಗಳಿಗೆ ಕಿವಿಗೊಡಬೇಡಿ ಎಂದು ಜೆಡಿಎಸ್ ಮುಖಂಡ ಎನ್.ಆರ್. ಸಂತೋಷ್ ಹೇಳಿದರು.




ಶ್ರೀನಗರ ಬಡಾವಣೆಯಲ್ಲಿರುವ ಪಕ್ಷದ ಕಚೇರಿಯಲ್ಲಿ ನಡೆದ ಎಸ್ಐಆರ್ ಕುರಿತ ಸಭೆಯಲ್ಲಿ ಮಾತನಾಡಿದ ಅವರು, ಚುನಾವಣಾ ಆಯೋಗ ಎರಡು ದಶಕದ ಬಳಿಕ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗೆ ಮುಂದಾಗಿರುವುದು ಸ್ವಾಗತಾರ್ಹ. ನೈಜ ಮತದಾರರ ಪತ್ತೆಗೆ ಆಯೋಗ ಪ್ರಕ್ರಿಯೆ ಪ್ರಾಂಭಿಸಿದ್ದು ಹಲವು ರಾಜ್ಯಗಳಲ್ಲಿ ಯಶಸ್ಸು ಕಂಡಿದೆ. ಪಶ್ಚಿಮ ಬಂಗಾಳದಲ್ಲಿ 94 ಲಕ್ಷ ಅನರ್ಹರನ್ನು ಪತ್ತೆ ಮಾಡಿದ್ದು ಐತಿಹಾಸಿಕ ಸಾಧನೆಯಾಗಿದೆ. ವಾಸ್ತವ ಮರೆಮಾಚಲು ಹೊರಟಿರುವ ಕಾಂಗ್ರೆಸ್ ಸಾಂವಿಧಾನಿಕ ಸಂಸ್ಥೆ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿರುವುದು ಖಂಡನೀಯ. ಮನೆ ಮನೆಗೆ ತೆರಳಿ ಜಾಗೃತಿ ಮೂಡಿಸುವ ಜೊತೆಗೆ ಕಾಂಗ್ರೆಸ್ ಕುತಂತ್ರಕ್ಕೆ ಜೆಡಿಎಸ್ ಕಾರ್ಯಕರ್ತರು ಹಾಗು ಮುಖಂಡರು ಪ್ರತ್ಯುತ್ತರ ನೀಡಬೇಕೆಂದು ಕರೆ ನೀಡಿದರು.

> ಮತದಾರರ ಪಟ್ಟಿಯಲ್ಲಿ ಎರಡು ಕಡೆ ಹೆಸರು ನಮೂದಾಗಿದ್ದಲ್ಲಿ ಒಂದೆಡೆ ಉಳಿಸಿಕೊಳ್ಳಲು ಅವಕಾಶವಿದೆ. ಹೊಸ ಸೇರ್ಪಡೆ, ರದ್ದು, ಬದಲಾವಣೆ ಸೇರಿ ಎಲ್ಲಾ ಪ್ರಕ್ರಿಯೆ ಎಸ್ಐಆರ್ ಮೂಲಕ ನಡೆಯಲಿದೆ. ರಾಜಕೀಯ ವಿರೋಧಿಗಳ ಅಪಪ್ರಚಾರಕ್ಕೆ ಯಾರೂ ಕಿವಿಗೊಡಬಾರದು.
>
> **– ಎನ್.ಆರ್.ಸಂತೋಷ್, ಜೆಡಿಎಸ್ ಮುಖಂಡ**

ಜೆಡಿಎಸ್ ವಕ್ತಾರ, ಎಸ್ಐಆರ್ ಉಸ್ತುವಾರಿ ಪ್ರದೀಪ್ ಕುಮಾರ್ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯ ಭದ್ರ ಬುನಾದಿಗೆ ಮತದಾನ ಮಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯ ಎಂಬುದನ್ನು ಮರೆಯಬಾರದು. ಚುನಾವಣಾ ಆಯೋಗ ಕಾಲ ಕಾಲಕ್ಕೆ ಅಗತ್ಯ ನಿಯಾಮವಳಿ ರೂಪಿಸಿ ಸಕ್ರಿಯ ಪಾಲ್ಗೊಳ್ಳುವಿಕೆಗೆ ಅವಕಾಶ ಮಾಡಿಕೊಟ್ಟಿದೆ. ತಮಿಳುನಾಡು, ಕೇರಳಂ, ಪಶ್ಚಿಮ ಬಂಗಾಳ ಸೇರಿ ಹಲವು ರಾಜ್ಯಗಳಲ್ಲಿ ಎಸ್ಐಆರ್ ನಡೆದಿದೆ. ಇದೀಗ ರಾಜ್ಯದಲ್ಲಿ ಆರಂಭಗೊಂಡಿದ್ದು ಜಾಗೃತಿ ಮೂಡಿಸಲು ಸಂಕಲ್ಪ ಮಾಡಬೇಕಿದೆ. ಅನರ್ಹರ ಸೇರ್ಪಡೆ ಕಾರಣಕ್ಕೆ ಕಳೆದ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಎನ್.ಆರ್. ಸಂತೋಷ್ ಕಡಿಮೆ ಅಂತರದಲ್ಲಿ ಸೋಲು ಕಾಣುವಂತಾಯಿತು. ಮತದಾರರ ಪಟ್ಟಿ ತಯಾರಿಸುವ ವೇಳೆ ಹೆಸರು ಕೈ ಬಿಡದಂತೆ ನೋಡಿಕೊಳ್ಳುವ ಜೊತೆಗೆ ಯುವ ಮತದಾರರು ಸೇರ್ಪಡೆಯಾಗಬೇಕು. ಅನರ್ಹರಿಗೆ ಅವಕಾಶ ಇರದಂತೆ ನೋಡಿಕೊಂಡಲ್ಲಿ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸಂತೋಷ್ ಗೆಲುವು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ ಎಂದರು.

ವಕ್ತಾರ ಮೋಹನ್ ಮಾತನಾಡಿ, ಎನ್‌ಡಿಎ ಶಕ್ತಿ ಬಲಗೊಳಿಸಲು ಮಾಜಿ ಪ್ರಧಾನಿ ಹೆಚ್. ಡಿ.ದೇವೇಗೌಡ ಹಾಗು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸಹಕಾರ ನೀಡುತ್ತಿದ್ದಾರೆ. 2028ಕ್ಕೆ ಅಧಿಕಾರದ ಚುಕ್ಕಾಣಿ ಹಿಡಿಯಲು ಮತದಾರರಲ್ಲಿ ಜಾಗೃತಿ ಉಂಟು ಮಾಡುವ ಅಗತ್ಯವಿದೆ ಎಂದು ಹೇಳಿದರು.

ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಭೋಜಾನಾಯ್ಕ್, ಗಂಡಸಿ, ಬಾಣಾವರ, ಕಣಕಟ್ಟೆ, ಕಸಬಾ ಹಾಗೂ ನಗರದ ವಿವಿಧ ವಾರ್ಡ್‌ಗಳ ಜೆಡಿಎಸ್ ಮುಖಂಡರು ಪಾಲ್ಗೊಂಡಿದ್ದರು.

# 21 ಲಕ್ಷ ರೂ. ಮೊತ್ತದ ನೆಲಹಾಸು ಕಾಮಗಾರಿಗೆ ಭೂಮಿಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕಿನ ದಿಡಗ ಗ್ರಾಮದ ಬಸ್ ನಿಲ್ದಾಣಕ್ಕೆ ನೆಲಹಾಸು ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.



ತಾಲ್ಲೂಕಿನ ದಿಡಗ ಗ್ರಾಮದಲ್ಲಿ ನಿರ್ಮಿತಿ ಕೇಂದ್ರದಡಿ 21 ಲಕ್ಷ ರೂ. ವೆಚ್ಚದ ಬಸ್ ನಿಲ್ದಾಣಕ್ಕೆ ಕಾಂಕ್ರೀಟ್ ನೆಲಹಾಸು ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ದಿಡಗ ಗ್ರಾಮ ತಾಲ್ಲೂಕಿನ ಗಡಿ ಭಾಗದಲ್ಲಿದ್ದು ತಿಪಟೂರು, ತುರುವೇಕೆರೆ ಹಾಗೂ ನಾಗಮಂಗಲ ತಾಲ್ಲೂಕು ಕೇಂದ್ರಗಳಿಗೆ ಸಂಪರ್ಕ ಕಲ್ಪಿಸಲಿದೆ. ಊಟಿ, ಬೆಂಗಳೂರು ಮತ್ತು ಮೈಸೂರು ನಗರಗಳಿಗೂ ಪ್ರತಿದಿನ ಇಲ್ಲಿಂದ ಸಾರಿಗೆ ಬಸ್ಸುಗಳ ಸಂಚಾರದ ವ್ಯವಸ್ಥೆ ಇರುವುದರಿಂದ ಇಲ್ಲಿನ ಬಸ್ ನಿಲ್ದಾಣದಲ್ಲಿ ಪ್ರತಿ ರಾತ್ರಿ 10 ಸಾರಿಗೆ ಬಸ್ ನಿಲುಗಡೆಯಾಗಲಿವೆ. ಆದ್ದರಿಂದ ಹೆಚ್ಚಿನ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು. ಬಸ್ ನಿಲ್ದಾಣಕ್ಕೆ ಕಾಂಕ್ರೀಟ್ ನೆಲಹಾಸಿನ ಜೊತೆಗೆ ಶೆಲ್ಟರ್ ನಿರ್ಮಾಣ ಮಾಡಲಾಗುವುದು. ಸರ್ಕಾರದಿಂದ ನಿರೀಕ್ಷೆಯಂತೆ ಅನುದಾನ ಸಿಗುತ್ತಿಲ್ಲ. ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಗೆ ಸಾಕಷ್ಟು ಅನುದಾನ ಬೇಕಿದೆ. ಇಲ್ಲಿನ ಪಶು ಆಸ್ಪತ್ರೆಯ ವೈದ್ಯರ ನೇಮಕಾತಿಗೆ ಗಮನ ಹರಿಸಲಾಗುವುದು ಎಂದರು.

ಕೃಷಿ ಹಾಗೂ ಇನ್ನಿತರ ಚಟುವಟಿಕೆಗಳಲ್ಲಿ ತಂತ್ರಜ್ಞಾನದ ಬಳಕೆಯ ಪರಿಣಾಮ ಪರಿಶ್ರಮವಿಲ್ಲದ ಜೀವನವು ಮನುಷ್ಯನನ್ನು ಅನಾರೋಗ್ಯದ ಕೂಪಕ್ಕೆ ತಳ್ಳುತ್ತಿದೆ. ತಾಲ್ಲೂಕಿನ ಎಲ್ಲಾ ಆರೋಗ್ಯ ಕೇಂದ್ರಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗುತ್ತಿದೆ ಎಂದರು.

ಹೋಬಳಿ ಕೇಂದ್ರ ಹಿರೀಸಾವೆ ಸಮುದಾಯ ಆರೋಗ್ಯ ಕೇಂದ್ರದ ಅಭಿವೃದ್ಧಿಗೆ 1 ಕೋಟಿ ರೂ. ಅಗತ್ಯವಿದ್ದು ಸರ್ಕಾರದ ಗಮನ ಸೆಳೆಯಲಾಗಿದೆ.

# ಮಾನವೀಯತೆ ಮೆರೆದ ಶಾಸಕ ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ರಸ್ತೆ ಅಪಘಾತದಲ್ಲಿ ಗಾಯಗೊಂಡ ವ್ಯಕ್ತಿಯನ್ನು ತಮ್ಮ ಕಾರಿನಲ್ಲೇ ಆಸ್ಪತ್ರೆಗೆ ಸಾಗಿಸುವ ಮೂಲಕ ಶಾಸಕ ಸಿಮೆಂಟ್ ಮಂಜು ಮಾನವೀಯತೆ ಮೆರೆದಿದ್ದಾರೆ.



ಸಕಲೇಶಪುರದಿಂದ ಆಲೂರು ಕಡೆಗೆ ತೆರಳುತ್ತಿದ್ದ ವೇಳೆ ಪಟ್ಟಣದ ಬಾಳೆಗದ್ದೆ ಸಮೀಪ ರಸ್ತೆ ದಾಟುತ್ತಿದ್ದ ಹೌಸಿಂಗ್ ಬೋರ್ಡ್ ನಿವಾಸಿ ಸಿದ್ದರಾಜು ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡು ರಕ್ತದ ಮಡುವಿನಲ್ಲಿ ಬಿದ್ದಿದ್ದರು.

ಘಟನೆ ಗಮನಿಸಿದ ಶಾಸಕ ಸಿಮೆಂಟ್ ಮಂಜು ತಕ್ಷಣ ಕಾರಿನಿಂದ ಇಳಿದು ಪರಿಸ್ಥಿತಿ ಪರಿಶೀಲಿಸಿದರು. ಅಂಬುಲೆನ್ಸ್ ಬರುವುದಕ್ಕೆ ವಿಳಂಬವಾಗುವ ಸಾಧ್ಯತೆ ಕಂಡು ಗಾಯಾಳುವನ್ನು ತಮ್ಮದೇ ಕಾರಿನಲ್ಲಿ ಕ್ರಾಫರ್ಡ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತುರ್ತು ಚಿಕಿತ್ಸೆ ಕೊಡಿಸಿದರು.

ವೈದ್ಯರ ಸಲಹೆಯಂತೆ ಹೆಚ್ಚಿನ ಚಿಕಿತ್ಸೆಗೆ ಗಾಯಾಳುವನ್ನು ಹಾಸನ ಆಸ್ಪತ್ರೆಗೆ ರವಾನಿಸಲಾಯಿತು.

# ಜಾನುವಾರು ಕಳವು ತಡೆಗೆ ಕಠಿಣ ಕ್ರಮ

## ಸ್ವಯಂ ಪ್ರೇರಿತ ಎಫ್ಐಆರ್‌ಗೆ ಪಶುಪಾಲನಾ ಇಲಾಖೆ ಚಿಂತನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸೇರಿ ಜಿಲ್ಲಾದ್ಯಂತ ನಡೆಯುತ್ತಿರುವ ಹಸು ಸೇರಿ ಇತರ ಮೂಕ ಪ್ರಾಣಿಗಳ ಕಳವು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಪಶುಪಾಲನಾ ಇಲಾಖೆ ಸ್ವಯಂ ಪ್ರೇರಿತ ದೂರು ದಾಖಲಿಸಲು ಮುಂದಾಗಿದೆ.

ನಗರದ ವಿದ್ಯಾ ನಗರದಲ್ಲಿ ಇತ್ತೀಚೆಗೆ ಹೆಲ್ಮೆಟ್ ಧರಿಸಿದ ಮುಸುಕುಧಾರಿಯೊಬ್ಬ ಗರ್ಭಿಣಿ ಹಸುವನ್ನು ಕದ್ದೊಯ್ಯುತ್ತಿರುವುದು ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿತ್ತು. ಈ ಸಂಬಂಧ ಹಸುವಿನ ವಾರಸುದಾರರು ಪತ್ತೆಗೆ ಮನವಿ ಮಾಡಿಕೊಂಡಿದ್ದರು ಸುದ್ದಿ ಎಲ್ಲೆಡೆ ಹರಿದಾಡುತ್ತಿದ್ದಂತೆ ಎಚ್ಚೆತ್ತುಕೊಂಡಿದ್ದ ಕಳ್ಳ ಬೂದೇಶ್ವರ ಮಠದ ಆವರಣದಲ್ಲಿ ಹಸು ಬಿಟ್ಟು ಪರಾರಿಯಾಗಿದ್ದ. ಆದರೆ ಎರಡೇ ದಿನದಲ್ಲಿ ಹಸು ಮೃತಪಟ್ಟಿದೆ. ದುರುದ್ದೇಶದಿಂದ ಆತ ಹಸುವಿಗೆ ವಿಷ ಬೆರೆಸಿದ್ದ ಎಂದು ವಾರಸುದಾರರಾದ ಸುಶೀಲಮ್ಮ ಅವರು ಆರೋಪಿಸಿದ್ದಾರೆ. ಹಾಸನದ ಪಶು ವೈದ್ಯಕೀಯ ಕಾಲೇಜಿನಲ್ಲಿ ಮರಣೋತ್ತರ ಪರೀಕ್ಷೆ ನಡೆದಿದ್ದು ವರದಿಗಾಗಿ ಅಧಿಕಾರಿಗಳು ಕಾಯುತ್ತಿದ್ದಾರೆ.

ಚನ್ನರಾಯಪಟ್ಟಣ ತಾಲ್ಲೂಕಿನ ಸುಂಡೇನಹಳ್ಳಿಯಲ್ಲೂ ನಾಲ್ಕು ದಿನಗಳ ಹಿಂದಷ್ಟೇ 4 ಟಗರು, ಮೇಕೆಗಳನ್ನು ಕಳವು ಮಾಡಲಾಗಿದೆ. ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿರುವ ಪಶುಪಾಲನಾ ಇಲಾಖೆ ಉಪನಿರ್ದೇಶಕ ಬಿ.ಕೆ.ರಮೇಶ್ ಅವರು ಪಶು ಚಿಕಿತ್ಸಾಲಯ ವ್ಯಾಪ್ತಿಯಲ್ಲಿ ಜಾನುವಾರುಗಳ ಕಳುವಾದರೆ ತಾಲ್ಲೂಕು ಸಹಾಯಕ ನಿರ್ದೇಶಕರಿಂದಲೇ ಎಫ್ಐಆರ್ ದಾಖಲಿಸಲು ಚಿಂತನೆ ನಡೆಸಿದ್ದಾರೆ. ಈ ಸಂಬಂಧ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ನೇಮಕವಾಗಿರುವ ಪಶು ಸಖಿಯರಿಗೆ ನಿರ್ದೇಶನ ನೀಡುವಂತೆ ಅಧೀನ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

### ಸಾಕ್ಷಿ ಕೇಳುವ ಪೊಲೀಸರು

ಜಾನುವಾರು ಕಳವು ಸಂಬಂಧ ದೂರು ನೀಡಲು ಪೊಲೀಸ್ ಠಾಣೆಗೆ ತೆರಳಿದರೆ ಸಾಕ್ಷಿ ಇಲ್ಲದೆ ಪ್ರಕರಣ ದಾಖಲಿಸುವುದಿಲ್ಲವೆಂದು ಪೊಲೀಸರು ಹೇಳುತ್ತಾರೆ. ಸಿಸಿಟಿವಿ ದೃಶ್ಯಾವಳಿಯನ್ನು ಸಾಬೀತುಪಡಿಸಿದ ನಂತರವೇ ಪ್ರಕರಣ ದಾಖಲಿಸುವ ಪ್ರಕ್ರಿಯೆ ಇದೆ. ಎಲ್ಲಾ ಪ್ರಕರಣಗಳಲ್ಲೂ ಸಿಸಿಟಿವಿ ಕ್ಯಾಮರಾ ದೃಶ್ಯಾವಳಿ ಇರುವುದಿಲ್ಲ. ಆದ್ದರಿಂದ ಸಮಸ್ಯೆಗೆ ಬೇರೆ ಮಾರ್ಗ ಕಂಡುಕೊಳ್ಳಬೇಕೆಂಬ ಆಗ್ರಹ ಕೇಳಿಬಂದಿತ್ತು.



### ವಿಮೆ, ಕಿವಿಯೋಲೆ ಹಾಕಿಸಲು ಸೂಚನೆ

ಜಾನುವಾರುಗಳಿಗೆ ಕಿವಿಯೋಲೆ ಹಾಗೂ ವಿಮೆ ಮಾಡಿಸುವಂತೆ ಅಧಿಕಾರಿಗಳು ರೈತರಿಗೆ ಸೂಚನೆ ನೀಡಿದ್ದಾರೆ. ಪಶು ಸಂಗೋಪನಾ ಇಲಾಖೆಯಿಂದ ನೀಡಲಾಗುವ ಕಿವಿಯೋಲೆಯಿಂದ ಹಸು ಎಲ್ಲೇ ಇದ್ದರೂ ಪತ್ತೆ ಮಾಡಬಹುದು.

ಅದರಲ್ಲಿ 12 ಡಿಜಿಟ್ ಸಂಖ್ಯೆ, ಬಾರ್ ಕೋಡ್ ಇರುವುದರಿಂದ ರಾಸು ಎಲ್ಲೇ ಇದ್ದರೂ ಪತ್ತೆಯಾಗುತ್ತದೆ. ಆದ್ದರಿಂದ ಎಲ್ಲರೂ ಕಡ್ಡಾಯವಾಗಿ ಓಲೆ ಹಾಕಿಸಬೇಕೆಂದು ಅಧಿಕಾರಿಗಳು ಮನವಿ ಮಾಡಿದ್ದಾರೆ.

ಜೊತೆಗೆ ವಿಮೆ ಇದ್ದರೂ ಅನುಕೂಲವಾಗುತ್ತದೆ. ಹಸು ಕಳುವಾದರೆ ವಿಮೆ ಮೊತ್ತ ಪಾವತಿಯಾಗುವುದಿಲ್ಲ. ಒಂದು ವೇಳೆ ಅನಾರೋಗ್ಯ ಅಥವಾ ಮತ್ತಿತರ ಕಾರಣಗಳಿಂದ ಮೃತಪಟ್ಟರೆ 15 ಸಾವಿರ ರೂ. ವರೆಗೆ ಪರಿಹಾರ ದೊರೆಯುತ್ತದೆ. ಕುರಿ, ಮೇಕೆಗಳಿಗೆ 7 ಸಾವಿರ ರೂ. ಹಾಗು 0ಯಿಂದ 6 ತಿಂಗಳ ಒಳಗಿನ ಪ್ರಾಣಿಗಳಿಗೆ 5 ಸಾವಿರ ರೂ.ತನಕ ಪರಿಹಾರ ದೊರೆಯಲಿದೆ. ರಾಸುಗಳಿಗೆ ವಿಮೆ ಹಾಗೂ ಕಿವಿಯೊಲೆ ಎರಡೂ ಇದ್ದರೆ ಅದರ ಮಾರುಕಟ್ಟೆ ಮೌಲ್ಯ ಎಷ್ಟಿರುತ್ತದೋ ಅಷ್ಟು ಹಣವನ್ನು ಸರ್ಕಾರದಿಂದ ಕೊಡಿಸುವ ಅವಕಾಶವಿದೆ.

> ಹಾಸನದಲ್ಲಿ ಜಾನುವಾರು ಕಳವು ಪ್ರಕರಣ ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಗ್ರಾಮೀಣ ಭಾಗದಲ್ಲಿ ಪಶು ಚಿಕಿತ್ಸಾ ಕೇಂದ್ರಗಳ ಮೂಲಕ ಮಾಹಿತಿ ತರಿಸಿಕೊಳ್ಳಲಾಗುತ್ತಿದೆ. ಎಮ್ಮೆ, ಹಸು ಸೇರಿ ಯಾವುದೇ ಪ್ರಾಣಿ ಕಳುವಾದರೂ ಹತ್ತಿರದ ಪೊಲೀಸ್ ಠಾಣೆಗೆ ದೂರು ನೀಡುವಂತೆ ಅಧೀನ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತೇನೆ. ವಿಳಂಬ ಮಾಡದೆ ದೂರು ದಾಖಲಿಸಿಕೊಳ್ಳುವಂತೆ ಪೊಲೀಸರಿಗೆ ಸೂಚನೆ ನೀಡುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಪತ್ರದ ಮೂಲಕ ಮನವಿ ಮಾಡುತ್ತೇನೆ.
>
> **-ಬಿ.ಕೆ.ರಮೇಶ್,**
> **ಪಶುಪಾಲನಾ ಇಲಾಖೆ ಉಪನಿರ್ದೇಶಕ**

### ಮಝುಲ್ ಮ್ಯಾಪಿಂಗ್ ಅನುಷ್ಠಾನ

ರಾಸುಗಳ ನಿಖರ ಪತ್ತೆ ಹಚ್ಚುವ ಉದ್ದೇಶದಿಂದ ಪ್ರಸ್ತುತ ಕಿವಿಯೊಲೆ ಹಾಕಲಾಗುತ್ತಿದೆಯಾದರೂ ಅಕ್ರಮವಾಗಿ ಕಸಾಯಿ ಖಾನೆಗೆ ಸಾಗಿಸುವವರು ಅದನ್ನು ಕಿತ್ತು ಹಾಕುವ, ಬಹಳ ದಿನಗಳಾದ ಬಳಿಕ ಅದೇ ಬಿದ್ದು ಹೋಗುವ ಸಾಧ್ಯತೆಯಿದೆ. ಆದ್ದರಿಂದ ಕೇಂದ್ರ ಸರ್ಕಾರ ರಾಷ್ಟ್ರೀಯ ಜಾನುವಾರು ಮಿಷನ್ ಯೋಜನೆಯಡಿ (ಎನ್ಎಲ್ಎಂ) ಮಝುಲ್ ಮ್ಯಾಪಿಂಗ್‌ಗೆ ಮುಂದಾಗಿದೆ. ಅಂದರೆ ಜಾನುವಾರುಗಳ ಮುಖದ ಭಾಗವನ್ನು ಸ್ಕ್ಯಾನ್ ಮಾಡಿ ದತ್ತಾಂಶವನ್ನು ಸಂಗ್ರಹಿಸಿಟ್ಟುಕೊಳ್ಳಲಾಗುತ್ತದೆ. ಕಿವಿಯೊಲೆಗಿಂತ ಈ ಪ್ರಕ್ರಿಯೆ ಪರಿಣಾಮಕಾರಿ ಆಗಲಿದೆ. ಪ್ರಾಯೋಗಿಕವಾಗಿ ರಾಜ್ಯದ ಎರಡು ಜಿಲ್ಲೆಗಳಲ್ಲಿ ಈ ಯೋಜನೆ ಜಾರಿಗೊಳಿಸಿದ್ದು ಮುಂದಿನ ವರ್ಷದಿಂದ ಹಾಸನದಲ್ಲೂ ಜಾರಿಯಾಗಲಿದೆ.

# ಅರಸೀಕೆರೆಯಲ್ಲಿ ಹಾಡ ಹಗಲೇ ಮರಗಳ ಹನನ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಇಲ್ಲಿನ ಶ್ರೀನಿವಾಸ ನಗರ ಬಡಾವಣೆಯಲ್ಲಿ ಹಾಡ ಹಗಲೇ ಅರಣ್ಯ ಇಲಾಖೆ ಅನುಮತಿ ಇಲ್ಲದೇ ಸರ್ಕಾರಿ ಸೇಂದಿವನ ಹಾಗೂ ಸ್ಮಶಾನ ಆವರಣದಲ್ಲಿನ ಮರಗಳನ್ನು ಕಡಿದು ಹಾಕಿರುವ ಆರೋಪ ಕೇಳಿಬಂದಿದೆ.

ಜನ ಸಂಚಾರ ಇಲ್ಲದ ವೇಳೆ ಯಂತ್ರೋಪಕರಣ ಬಳಸಿ ಬೃಹತ್ ನೆರಳಿನ ಮರಗಳನ್ನು ಕತ್ತರಿಸಿ ಹಾಕಲಾಗಿದೆ. ಅಲ್ಲದೇ ಟ್ರ್ಯಾಕ್ಟರ್ ಮೂಲಕ ಬೇರೆಡೆಗೆ ಸಾಗಿಸಲು ಹೊರಟಿದ್ದರು ಎನ್ನಲಾಗಿದೆ. ಸ್ಥಳೀಯರು ನೀಡಿದ ಮಾಹಿತಿ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಮರದ ದಿಮ್ಮಿಗಳನ್ನು ವಶಕ್ಕೆ ಪಡೆದಿದ್ದಾರೆ.

ವಲಯ ಅರಣ್ಯಾಧಿಕಾರಿ ಹೇಮಂತ್ ಸುದ್ದಿಗಾರರೊಂದಿಗೆ ಮಾತನಾಡಿ, ಸರ್ಕಾರಿ ಸೇಂದಿವನ ಹಾಗೂ ಸ್ಮಶಾನದ ಆವರಣದಲ್ಲಿನ ಮರಗಳನ್ನು ಕತ್ತರಿಸಿರುವುದು ತಿಳಿದು ಬಂದಿದೆ. ಮರಗಳ ದಿಮ್ಮಿಗಳನ್ನು ವಶಕ್ಕೆ ಪಡೆದು ಹಾಸನಕ್ಕೆ ಕಳುಹಿಸಿ ಕೊಡಲಾಗಿದೆ.

ಕೃತ್ಯವೆಸಗಿದ ಆರೋಪಿಗಳ ವಿರುದ್ಧ ಇಲಾಖೆ ನಿಯಮಾನುಸಾರ ಕ್ರಮ ಜರುಗಿಸಲಿದ್ದೇವೆ ಎಂದು ತಿಳಿಸಿದ್ದಾರೆ. ಹಾಡ ಹಗಲೇ ಮರಗಳ ಮಾರಣ ಹೋಮ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಎಸ್ಐಆರ್ ವೇಳೆ ಲೋಪವಾಗದಂತೆ ಎಚ್ಚರ ವಹಿಸಲು ಸೂಚನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಚುನಾವಣಾ ಆಯೋಗ ಕೈಗೊಂಡಿರುವ ಸಮಗ್ರ ವಿಶೇಷ ಮತದಾರರ ಪರಿಷ್ಕರಣೆ ಕಾರ್ಯ ಅತ್ಯಂತ ಪಾರದರ್ಶಕವಾಗಿ, ಗಂಭೀರತೆ ಮತ್ತು ಜವಬ್ದಾರಿಯಿಂದ ಮಾಡಬೇಕಿದೆ. ಇಲ್ಲಿ ಯಾವುದೇ ಸಮಸ್ಯೆ ಎದುರಾದರೇ ಆಯೋಗ ಕಾನೂನಾತ್ಮಕ ಕ್ರಮ ಜರುಗಿಸಲಿದೆ. ಇದಕ್ಕೆ ನಮ್ಮ ಬಿಎಲ್‌ಒಗಳು ಅವಕಾಶ ಮಾಡಿಕೊಡದೇ ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಟ್ಟಣದ ಶಿಕ್ಷಕರ ಭವನದಲ್ಲಿ ನಡೆದ ಮತಗಟ್ಟೆ ಅಧಿಕಾರಿ ಮತ್ತು ಮೇಲ್ವಿಚಾರಕರ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಶೇ.95ರಷ್ಟು ಮ್ಯಾಪಿಂಗ್ ಕಾರ್ಯ ನಡೆದಿದೆ. ಇದು ಕೂಡಲೇ ಶೇ.100ರಷ್ಟು ಪ್ರಗತಿಯಾಗಬೇಕಿದೆ. ಬೂತ್ ಲೆವೆಲ್ ಏಜೆಂಟರ ನೇಮಕ ಕುರಿತು ರಾಜಕೀಯ ಪಕ್ಷಗಳ ಮುಖಂಡರಲ್ಲಿ ಕೇಳಿಕೊಳ್ಳುತ್ತೇವೆ. ಅವರು ನೇಮಿಸುತ್ತಾರೆ. ಈಗಾಗಲೇ ಈ ಕ್ಷೇತ್ರದಲ್ಲಿ 326 ಮಂದಿ ಬಿಎಲ್‌ಎಗಳು ನೇಮಕವಾಗಿದ್ದಾರೆ.

ಮುಂದಿನ ಪ್ರಕ್ರಿಯೆ ಮಾಡುವಾಗ ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗೆ ಉಳಿಯಬಾರದು. ಅದರಲ್ಲಿಯೂ ಕೂಡ ಗಣ್ಯಾತಿ ಗಣ್ಯರನ್ನು ಕೈಬಿಡಬಾರದು. ಏನಾದರೂ ಮಾಹಿತಿ ಪಡೆಯಬೇಕಾದರೆ ಈ ಕ್ಷೇತ್ರದ ಆರ್‌ಒ ರುದ್ರಮುನಿ ಹಾಗೂ ಎಆರ್‌ಒ ಸೌಮ್ಯ ಅವರನ್ನು ಸಂಪರ್ಕಿಸಬಹುದಾಗಿದೆ ಎಂದು ಹೇಳಿದರು.

ಈ ವಿಶೇಷ ಮತ ಪರಿಷ್ಕರಣೆ ಸಂಬಂಧ ಈಗಾಗಲೇ ಮತಗಟ್ಟೆ ಅಧಿಕಾರಿಗಳು, ಸೂಪರ್‌ವೈಸರ್ ಹಾಗೂ ಮಾಸ್ಟರ್ ಟ್ರೈನರ್‌ಗಳಿಗೆ ತರಬೇತಿ ನೀಡಲಾಗಿದೆ. ನಮಗೆ ಟೋಲ್ ಫ್ರೀ ನಂಬರ್ 1950 ಇದೆ. ಇಲ್ಲಿಗೆ ಕಾಲ್ ಮಾಡಿ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ಎಲ್ಲಾ ಗ್ರಾಪಂ ಆವರಣದಲ್ಲಿ ಈ ಕುರಿತು ಮಾಹಿತಿ ಒದಗಿಸಲು ತಾಪಂ ಇಒ ಕ್ರಮವಹಿಸಬೇಕಿದೆ ಎಂದರು.

ಒಬ್ಬ ವ್ಯಕ್ತಿ ಮತದಾರ ಅನಿಸಿಕೊಳ್ಳಬೇಕಾದರೇ ಭಾರತೀಯ ಪ್ರಜೆಯಾಗಿರಬೇಕು. 18 ವರ್ಷ ತುಂಬಿರಬೇಕು. ಈ ಎರಡು ಪ್ರಮುಖ ಮಾನದಂಡವಾಗಿದೆ. ಎಸ್ಐಆರ್‌ನಲ್ಲಿ ಇರುವ ಅಂಶಗಳ ಕುರಿತು ಮತದಾರರಿಗೆ ಮಾಹಿತಿ ನೀಡಬೇಕಿದೆ. ಇದುವರೆಗೆ 2002ರಲ್ಲಿ ಈ ಕಾರ್ಯ ನಡೆದಿದೆ. ಇದುವರೆಗೂ 10 ಬಾರಿ ಎಸ್ ಐಆರ್ ನಡೆದಿದೆ. ಮತದಾರರ ಪಟ್ಟಿ ಆರೋಗ್ಯಕರವಾಗಿರಬೇಕು. ಈಗ ನಡೆಯುತ್ತಿರುವ ಮತದಾರರ ಪಟ್ಟಿಯನ್ನು ನ್ಯಾಯಸಮ್ಮತವಾಗಿ ರೂಪಿಸಬೇಕಿದೆ. ಇದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.


ಸಭೆಯಲ್ಲಿ ತಹಸೀಲ್ದಾರ್ ಸೌಮ್ಯ ಸೇರಿದಂತೆ ಇತರೆ ಅಧಿಕಾರಿಗಳು, ಸಿಬ್ಬಂದಿ, ಮತಗಟ್ಟೆ ಅಧಿಕಾರಿಗಳು, ಮೇಲ್ವಿಚಾರಕರು ಇದ್ದರು.

# ಪರಿಸರ ಜಾಗೃತಿ ಪ್ರಚಾರಕ್ಕಷ್ಟೇ ಸೀಮಿತವಾಗದಿರಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಪರಿಸರ ಜಾಗೃತಿ ಕೇವಲ ಪ್ರದರ್ಶನಕ್ಕೆ ಸೀಮಿತವಾಗಬಾರದು. ಗಿಡ ನೆಡುವುದರ ಜೊತೆಗೆ ಅವುಗಳನ್ನು ಮರವಾಗುವವರೆಗೆ ಪೋಷಿಸುವ ಜವಾಬ್ದಾರಿ ಪ್ರತಿಯೊಬ್ಬರದ್ದಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಎಚ್.ಬಿ. ಮದನಗೌಡ ಹೇಳಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಸಾಂಸ್ಕೃತಿಕ ಘಟಕದ ಸಂಯುಕ್ತಾಶ್ರಯದಲ್ಲಿ ‘‘ಪರಿಸರವಿದ್ದರೆ ಬದುಕು ಇದುವೇ ಸೃಷ್ಟಿಯ ಸಾರ’’ ಎಂಬ ವಿಷಯದ ಕುರಿತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಚರ್ಚಾ ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ಪತ್ರಕರ್ತರ ಸಂಘದಲ್ಲೂ ಕೂಡ ಕ್ರೀಡಾ ಕಾರ್ಯಕ್ರಮಗಳು ಸೇರಿದಂತೆ ವಿವಿಧ ಸಮಾಜಮುಖಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ತಾಲೂಕು ಮಟ್ಟದಲ್ಲಿ ಪರಿಸರ ಕುರಿತು ಇಂತಹ ಕಾರ್ಯಕ್ರಮವನ್ನು ಪ್ರಥಮ ಬಾರಿಗೆ ಆಯೋಜಿಸಿರುವುದು ಸಂತಸದ ಸಂಗತಿ ಎಂದರು.



ಸಂಘದ ತಾಲೂಕು ಅಧ್ಯಕ್ಷ ಬಿ.ಬಿ ಶಿವರಾಜ್ ಮಾತನಾಡಿ, ಪತ್ರಕರ್ತರು ಕೇವಲ ಸುದ್ದಿಗಳನ್ನು ಪ್ರಕಟಿಸುವುದಷ್ಟೇ ಅಲ್ಲದೆ ಸಮಾಜಮುಖಿ ಕಾರ್ಯಕ್ರಮಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕಾರ್ಯದಲ್ಲಿಯೂ ತೊಡಗಿಸಿಕೊಳ್ಳಬೇಕು ಎಂದು ಜಿಲ್ಲಾ ಪತ್ರಕರ್ತರ ಸಂಘದ ಸೂಚನೆ ಮೇರೆಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಸಿಪಿಐ ರೇವಣ್ಣ ಮಾತನಾಡಿ, ಪರಿಸರ ಸಂರಕ್ಷಣೆ ಒಬ್ಬರ ಜವಾಬ್ದಾರಿಯಲ್ಲ. ಇಡೀ ಸಮಾಜ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಉತ್ತಮ ಫಲಿತಾಂಶ ಸಾಧ್ಯ. ನೀರು, ಮಣ್ಣು ಮತ್ತು ಗಾಳಿಯಂತಹ ನೈಸರ್ಗಿಕ ಸಂಪನ್ಮೂಲಗಳನ್ನು ಉಳಿಸುವುದು ಎಲ್ಲರ ಕರ್ತವ್ಯ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ, ಪುರಸಭೆ ಅಧ್ಯಕ್ಷ ಅಕ್ರಮ್ ಶರೀಫ್ ಮಾತನಾಡಿದರು.

ಚರ್ಚಾ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಪರಿಸರ ಸಂರಕ್ಷಣೆ, ಪ್ರಕೃತಿಯ ಮಹತ್ವ ಹಾಗೂ ಹಸಿರು ಭವಿಷ್ಯದ ಅಗತ್ಯತೆ ಕುರಿತು ತಮ್ಮ ಅಭಿಪ್ರಾಯಗಳನ್ನು ಮಂಡಿಸಿ ಮೆಚ್ಚುಗೆಗೆ ಪಾತ್ರರಾದರು.

ಪ್ರಧಾನ ಕಾರ್ಯದರ್ಶಿ ಬಿ.ಎಲ್. ಲಕ್ಷ್ಮಣ್, ಹೆಬ್ಬಾಳು ಹಾಲಪ್ಪ, ಮಲ್ಲೇಶ್, ಬಿ.ಆರ್. ಲೋಹಿತ್, ಆರ್. ವೆಂಕಟೇಶ್, ನಿವೃತ್ತ ಶಿಕ್ಷಕ ರಾಜಶೇಖರ್, ಉಪನ್ಯಾಸಕ ಷಣ್ಮುಖ, ಶಿಕ್ಷಕಿ ವೇದ ಅಶೋಕ್, ಬಿ.ಎನ್. ಗಣೇಶ್, ವಿಜಯಕುಮಾರ್ ಮತ್ತಿತರರಿದ್ದರು.

# ಒಂದೇ ಗ್ರಾಮದಲ್ಲಿ ಎರಡು ಮನೆ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ಹಿರೀಸಾವೆ ಪೊಲೀಸ್ ಠಾಣೆ ವ್ಯಾಪ್ತಿಯ ಎಂ.ಹೊನ್ನೇನಹಳ್ಳಿ ಗ್ರಾಮದಲ್ಲಿ ನಡೆದ ಪ್ರತ್ಯೇಕ ಪ್ರಕರಣಗಳಲ್ಲಿ ನಗದು ಸೇರಿ 2.16 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳುವಾಗಿರುವ ಘಟನೆ ನಡೆದಿದೆ.

ಗ್ರಾಮದ ಚಂದ್ರಮ್ಮ ಎಂಬುವವರ ಮನೆಗೆ ಜೂ. 22ರ ರಾತ್ರಿ ಹಿಂಬಾಗಿಲು ಮುರಿದು ಪ್ರವೇಶಿಸಿರುವ ಕಳ್ಳರು ದಿವಾನ್ ಕಾಟ್‌ನಲ್ಲಿಟ್ಟಿದ್ದ 12 ಗ್ರಾಂ ತೂಕದ ಚಿನ್ನದ ಸರ, 8 ಗ್ರಾಂ ತೂಕದ ಚಿನ್ನದ ಹ್ಯಾಂಗಿಂಗ್ಸ್, 5 ಗ್ರಾಂ ತೂಕದ ಒಂದು ಚಿನ್ನದ ಉಂಗುರ, 30 ಗ್ರಾಂ ತೂಕದ ಬೆಳ್ಳಿಯ ಎರಡು ಬಟ್ಟಲು ಮತ್ತು 14,500 ರೂ. ನಗದು ಅಪಹರಿಸಿದ್ದಾರೆ.

ಅದೇ ದಿನ ಜಯಮ್ಮ ಎಂಬುವವರ ಮನೆಗೆ ನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 10 ಗ್ರಾಂ ತೂಕದ ಚಿನ್ನದ ಚೈನ್, 3 ಗ್ರಾಂನ ಚಿನ್ನದ ಉಂಗುರ, 5 ಗ್ರಾಂ ತೂಕದ ಚಿನ್ನದ ಮಾಟಿ, 3 ಗ್ರಾಂನ ಚಿನ್ನದ ಓಲೆ, ಬೆಳ್ಳಿ ಬಟ್ಟಲು ಮತ್ತು ಬೆಳ್ಳಿ ದೀಪ ಹಾಗು 30 ಸಾವಿರ ರೂ. ನಗದು ಕದ್ದಿದ್ದಾರೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಇತಿಹಾಸದಲ್ಲಿ ಈ ದಿನ

### ಜೂನ್-25

1876: ಲಿಟಲ್ ಬಿಗ್‌ಹಾರ್ನ್ ಕದನ ಆರಂಭವಾಯಿತು. ಇದು ಅಮೆರಿಕದ ಸೇನೆ ಮತ್ತು ಮೂಲ ನಿವಾಸಿಗಳ ನಡುವಿನ ಮಹತ್ವದ ಯುದ್ಧವಾಗಿತ್ತು.

1950: ಕೊರಿಯಾ ಯುದ್ಧ ಆರಂಭವಾಯಿತು. ಉತ್ತರ ಕೊರಿಯಾ ದಕ್ಷಿಣ ಕೊರಿಯಾ ಮೇಲೆ ದಾಳಿ ನಡೆಸಿದ ಹಿನ್ನೆಲೆಯಲ್ಲಿ ಯುದ್ಧ ಶುರುವಾಯಿತು.

1975: ಅಂದಿನ ಪ್ರಧಾನಿ ಇಂದಿರಾ ಗಾಂಧಿ ನೇತೃತ್ವದಲ್ಲಿ ಭಾರತದಲ್ಲಿ ತುರ್ತು ಪರಿಸ್ಥಿತಿ (ಎಮರ್ಜೆನ್ಸಿ) ಘೋಷಿಸಲಾಯಿತು.

1983: ಭಾರತದ ಕ್ರಿಕೆಟ್ ತಂಡವು ಲಾರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ವಿಶ್ವಕಪ್ ಫೈನಲ್‌ನಲ್ಲಿ ವೆಸ್ಟ್ ಇಂಡೀಸ್ ತಂಡವನ್ನು ಸೋಲಿಸಿ ಮೊದಲ ಬಾರಿಗೆ ಕ್ರಿಕೆಟ್ ವಿಶ್ವಕಪ್ ಗೆದ್ದಿತು. ತಂಡದ ನಾಯಕ ಕಪಿಲ್ ದೇವ್ ಆಗಿದ್ದರು.

**ಜನನ**

1900: ಭಾರತದ ಕೊನೆಯ ವೈಸರಾಯ್ ಲಾರ್ಡ್ ಲೂಯಿಸ್ ಮೌಂಟ್‌ಬ್ಯಾಟನ್

1931: ಭಾರತದ ಮಾಜಿ ಪ್ರಧಾನಮಂತ್ರಿ ವಿ.ಪಿ. ಸಿಂಗ್ ಜನಿಸಿದರು.

**ನಿಧನ**

2009: ವಿಶ್ವಪ್ರಸಿದ್ಧ ಪಾಪ್ ಗಾಯಕ ಮೈಕೆಲ್ ಜಾಕ್ಸನ್

# ನಾನು.....! ಮೋಹಿನಿ ಗಂಡಾ, ಮೋಹನಾ!!!

**- ಧನಂಜಯ ಜೀವಾಳ ಬಿ.ಕೆ.**

ದಿನಪತ್ರಿಕೆಯಲಿ ಹಾಗೆಯೇ ಕಣ್ಣಾಡಿಸಿ ಆಸರಿ; ತಡವಾಗುತ್ತೆಟಿ ಎಂದು ಮಡಿಸಿಡಲು ಹೊರಟವನಿಗೆ ಏನೋ ವಿಶೇಷ ಕಂಡಂತಾಯ್ತಲ್ಲ ಎಂದು ಪುನಃ ಬಿಡಿಸಿ ಆರನೇ ಪುಟದ ಕೆಳಮೂಲೆಯನ್ನು ನಿರುಕಿಸಿದರೆ ನನಗೆ ಪ್ರಿಯವಾದ ಸುದ್ದಿಯೇ ಕಾಣಬೇಕೇ? ನಿಜ ಹೇಳಬೇಕೆಂದರೆ ನಾನು ಆ ಸುದ್ದಿಯನ್ನು ನೋಡಿರಲೂ ಇಲ್ಲ. ಆದರೆ ಆರನೇ ಇಂದ್ರಿಯ ಅದು ಹೇಗೋ ಏನೋ ಇಲ್ಲಿ ಯಾವುದೋ ಅಗತ್ಯ ಮಾಹಿತಿಯಿದೆಯೆಂದು ಅತ್ಯಂತ ಸಹಜ ಎಂಬಂತೆ ಎಚ್ಚರಿಸಿತ್ತು. ಸರಸರನೇ ಮಾಹಿತಿ ಸಂಗ್ರಹಿಸಿದ ನಾನು ಆ ಮೂರು ದಿನಗಳ ಅವಧಿಗೆ ರಜೆಯನ್ನು ಯೋಜಿಸತೊಡಗಿದೆ. ಬಹಳ ಸಮಯದಿಂದ ಹೇಗಾದರೂ, ಎಂದಾದರೂ ಹೋಗಿ ಯೇತೀರಬೇಕೆಂದು ಆಕಾಂಕ್ಷೆಯಿಟ್ಟುಕೊಂಡಿದ್ದ ನನಗೆ ಈ ಸಂದರ್ಭ ಇಷ್ಟು ಬೇಗನೆ ಈ ರೀತಿ ಬಳ್ಳಿ ಕಾಲಿಗೆ ತೊಡರಿದಂತೆ ಆಕಸ್ಮಿಕವಾಗಿ ಸಂಭವಿಸಲಿದೆ ಎಂದು ಅನಿಸಿ ಸಂತಸವೇ ಆಯಿತು. ಆಗ ಇನ್ನೂ ಲೋಕಲ್ ಎಕ್ಸ್‌ಚೇಂಜ್‌ನ ಟ್ರಂಕ್‌ಕಾಲ್‌ಗಳ ಕಾಲ, ಎಕ್ಸ್‌ಚೇಂಜ್ ವ್ಯಾಪ್ತಿಯೊಳಗೇ ಸಂಪರ್ಕಿಸಬೇಕಾದಲ್ಲಿ ಒನ್ ಸೆವೆನ್ ನೈನ್ ಕೊಡಿ ಎಂದು ಟೆಲಿಫೋನ್ ಆಪರೇಟರ್‌ಗೆ ತಿಳಿಸಿದರೆ ಅವರು ತನ್ನೆದುರು ಇರುವ ದೊಡ್ಡ ಬೋರ್ಡ್‌ನಲ್ಲಿ ಒನ್ ಸೆವೆನ್ ನೈನ್ ಅನ್ನು ಹುಡುಕಿ, ನಮ್ಮ ಫೋನ್‌ನ ತಂತಿಯನ್ನು ಎತ್ತಿ ಒನ್ ಸೆವೆನ್ ನೈನ್‌ನ ಸಂಪರ್ಕಕ್ಕೆ ಚುಚ್ಚಿಕೊಡಬೇಕಿತ್ತು. ಆಗ ನಾವು ಹಲೋ... ಹಲೋ... ಎಂದು ಮಾಹಿತಿ ತಲುಪಿಸುವಷ್ಟರಲ್ಲಿ ಸಾಕುಸಾಕಾಗಿ ಹೋಗುತ್ತಿತ್ತು.



ಇನ್ನು ಟ್ರಂಕ್ ಕಾಲ್ ಆಗಿದ್ದರೆ ಮುಗಿದೇ ಹೋಯ್ತು. ನಮ್ಮ ಎಕ್ಸ್ ಚೇಂಜಿಗೆ ಬೇರೆ ಊರಿನ ನಂಬರ್ ಅನ್ನು ಮೂವತ್ತ ಮೂರು ಬಾರಿ ಕೂಗಿ ಹೇಳಿ ಆನಂತರ ಟೆಲಿಫೋನಿನವರು ಆ ನಂಬರ್‌ನ ಎಕ್ಸ್‌ಚೇಂಜನ್ನು ಸಂಪರ್ಕಿಸಿ, ಆ ಎಕ್ಸ್ ಚೇಂಜ್‌ನವರು ಬೇಕಾದ ನಂಬರ್ ನವರನ್ನು ಸಂಪರ್ಕಿಸಿ ಅವರನ್ನು ಹೋಲ್ಡಿಂಗ್‌ನಲ್ಲಿರಲು ಹೇಳಿ ನಂತರ ನಮ್ಮ ಎಕ್ಸ್‌ಚೇಂಜ್‌ನ್ನು ಸಂಪರ್ಕಿಸಿ ನಮ್ಮ ಎಕ್ಸ್ ಚೇಂಜ್‌ನವರು ನಮ್ಮನ್ನು ಸಂಪರ್ಕಿಸಿ ನಾವು ಅಪೇಕ್ಷಿಸಿದವರ ಸಂಪರ್ಕ ಸಾಧಿಸಿ ನಮ್ಮನ್ನು ಮಾತನಾಡಲು ಹೇಳಿ, ವಿಷಯ ತಲುಪಿಸುವಷ್ಟರಲ್ಲಿ ಇಲ್ಲಿ ಯಾರಾದರೂ ಸತ್ತಿದ್ದರೆ ಅವರ ದಫನ್ ಮುಗಿದಿರುತ್ತಿತ್ತು. ಬೆಳಿಗ್ಗೆ ಫೋನ್ ಮಾಡಿ ಸಂಪರ್ಕಕ್ಕೆ ಕಾಯ್ದು ಕುಳಿತಿದ್ದರೆ ಸಂಜೆಯೋ-ರಾತ್ರಿಯೋ ಮಾತನಾಡಲು ಸಾಧ್ಯವಾಗುತ್ತಿತ್ತು. ಈ ನಡುವೆ ಅಗತ್ಯ ಕೆಲಸಗಳಿಗೂ ಹೋಗದೇ, ಸಿಗಬಹುದಾದ ಸಂಪರ್ಕ ಸಿಕ್ಕಿ ಮಾತನಾಡಲು ಸಾಧ್ಯವಾಗದೇ ಎಲ್ಲಿ ಕೈತಪ್ಪಿ ಹೋಗುವುದೋ ಎಂದು ಕಾಯ್ದು ಕೂರುವುದಿತ್ತಲ್ಲಾ ಅದು ತೀರಾ ಸಂಕಟ. ಕಡೆಗೆ ಸಂಜೆ ಐದಕ್ಕೆ ಆಆ ಎಕ್ಸ್ ಚೇಂಜ್ ಲೈನ್ ಸರಿಯಿಲ್ಲ, ಮರ ಬಿದ್ದಿದೆಯಂತೆ, ಸಿಡಿಲು ಬಡಿದು ಎಕ್ಸ್ಚೇಂಜಿನ ಬೋರ್ಡೇ ಸುಟ್ಟುಹೋಗಿದೆಯಂತೆ,

ಅಡಚಣೆಗಾಗಿ ವಿಷಾಧಿಸುತ್ತೇವೆ ನಾಳೆ ಟ್ರೈಮಾಡಿಟಿ ಅಂದದ್ದೂ ಉಂಟು.

ನನ್ನ ಗೆಳೆಯರೊಬ್ಬರ ಅಂಗಡಿಯಲ್ಲಿ ಕೆಲಸಕ್ಕಿದ್ದ ಆನಂದ ಎನ್ನುವವನಿಗೆ ಮಾಲೀಕರಿಲ್ಲದಾಗ ಟೆಲಿಫೋನ್ ಕರೆಯನ್ನು ಸ್ವೀಕಾರ ಮಾಡುವುದೆಂದರೆ ಒಂದು ಅಮೋಘ ಅತ್ಯಪೂರ್ವ ಅನುಭವ.

ಬೇರೆಲ್ಲ ಮಾಡಲೇಬೇಕಿದ್ದ ಕೆಲಸಗಳನ್ನು ಬದಿಗಿಟ್ಟು ಕಿವಿಯೆಲ್ಲವನ್ನೂ ಫೋನಿನೆಡೆಗೇ ಕೇಂದ್ರೀಕರಿಸಿ ತನ್ನೆಲ್ಲ ಪಂಚೇಂದ್ರಿಯಗಳನ್ನು ಫೋನೆಂಬ ಮಾಯಾವಸ್ತುವಿನೆಡೆಗೇ ಗುರಿಮಾಡಿಕೊಂಡು ಚಾತಕಪಕ್ಷಿಯಂತೆ ಕಾಯುತ್ತಿದ್ದ.

ಫೋನ್ ರಿಂಗ್ ಆಗಲು ಇನ್ನೂ ಪ್ರಾರಂಭಿಸಿರುವುದಿಲ್ಲ; ಕಿಣ್ ಎನ್ನಬೇಕಷ್ಟೇ, ಇಲಿ ಮೇಲೆ ನೆಗೆಯುವ ಬೆಕ್ಕಿನಂತೆ ಫಣಂಗನೇ ಹಾರಿ, ಅತ್ತಲಿಂದ ಯಾರು ಯಾಕೆ ಎಲ್ಲಿಂದ ಮಾತನಾಡುತ್ತಿದ್ದಾರೆಂದು ಸಹಾ ವಿಚಾರಿಸದೇ ಹಲೋ ನಾನು ಆನಂದ, ಆನಂದ ಪೂಜಾರಿ, ಫೋನಿನಲ್ಲಿ ಮಾತಾಡ್ತಿದೀನಿ, ಏನ್ ಮತೇ ಚೆನಾಗಿದೀರಾ.... ಎಂದು ಪ್ರಾರಂಭಿಸಿಯೇ ಬಿಡುತ್ತಿದ್ದ. ಫೋನಿನಲ್ಲಿ ಮಾತನಾಡುವುದು, ನನಗೆ ಫೋನ್ ಬಂದಿತ್ತು, ಇವತ್ತು ಅವರಿಗೆ ಫೋನ್ ಮಾಡಿದೆ ಎನ್ನುವುದು ಪ್ರತಿಷ್ಠೆಯ ಪ್ರಶ್ನೆ ಎಂದು ಹೇಳಿಕೊಳ್ಳುವಂಥಾ ಕಾಲದಲ್ಲಿ ನಾನು ಚಾರಣ ಹೋಗುವ ಸಲುವಾಗಿ ಬೆಂಗಳೂರಿನ ಎನ್. ವೈ.ಎ.ಸಿಯವರನ್ನು ಸಂಪರ್ಕಿಸಲು ಯತ್ನಿಸಿದ್ದೆ.

ಏನು ಮಾಡಿದರೂ ಸಂಪರ್ಕ ಸಿಗದಿದ್ದಾಗ ಹಳೇ ಗಂಡನ ಪಾದವೇ ಗತಿ ಎಂದು ಪತ್ರವನ್ನೇ ಬರೆದು ವಿವರಗಳನ್ನು ತಿಳಿದುಕೊಂಡೆ. ಕಿವಿಗಿಂತಲೂ ಕೋಡು ಎತ್ತರವಿದ್ದರೂ ಕಿವಿಯ ಸ್ಥಾನವನ್ನು, ಯಾವಾಗ ಬೇಕಾದರೂ ಮುರಿದು ಹೋಗಬಹುದಾದ ಕೋಡು ತುಂಬಲು ಸಾಧ್ಯವಿಲ್ಲವೆಂದು ಮನವರಿಕೆಯಾಯ್ತು.

(ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248